Sri M. LINGANNA.—Can I take it that in answer to (*d*) an estimate for another canal is being prepared?

Sri Kadidal MANJAPPA.—There is no proposal at present.

Sri M. LINGANNA.—In the answer to (d) you have stated that the total cost of the estimate is Rs. 5,900. May I know whether there is an estimate prepared for the additional canal being dug to this tank?

Sri Kadidal MANJAPPA.—I think it has been made clear in answer (c) "Yes, for improving the Tagadur channel. Only 30 acres will come under cultivation. . ."

This answer (*d*) refers to the answer given to question (c).

Sri M. LINGANNA.—Shall I take it that there is no estimate prepared for a new canal in addition to the one that is in existence?

Sri Kadidal MANJAPPA.—I am afraid there is no such proposal at present.

Sri M. LINGANNA.—Shall I take it that the Government will issue instructions to the concerned officers to sanction this estimate early?

Sri Kadidal MANJAPPA.—It all depends upon the various factors—to consider the remunerative aspect, the utility aspect and other considerations.

Sri M. LINGANNA.—Whether the Government would examine all these aspects?

Sri Kadidal MANJAPPA.—Oh, yes. As early as possible all these aspects will be examined.

Tank at Heggere village (construction).

Q.—457. Sri B. HUTCHE GOWDA (Turuvekere).—

Will the Government be pleased to state :—

(*a*) whether an estimate has been prepared for constructing a tank at Heggere village, Kasaba hobli, Turuvekere Taluk; if so, its estimated amount;

(*b*) the extent of wet land irrigable under this tank; whether these landholders have not agreed to pay the contribution;

(*c*) whether they would sanction this tank work early?

A.—Sri Kadidal MANJAPPA (Minister for Revenue and Public Works).—

(*a*) Yes, for Rs. 3,40,000.

(*b*) About 210 acres. Yes, they have agreed to pay contribution.

(*c*) This will be considered on the receipt of the estimate.

ಶ್ರೀ ಬಿ. ಹುಚ್ಚೇಗೌಡ.—ಈ ಎಸ್ಟಿಮೇಟ್ ಬಂದಿದೆಯೇ?

Sri Kadidal MANJAPPA.—It is under scrutiny in the Division office at Tumkur.

ಶ್ರೀ ಬಿ. ಹುಚ್ಚೇಗೌಡ.—ಬಂದಮೇಲೆ ಕಟ್ಟುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈ ಪ್ರಾಜೆಕ್ಟುಗಳ ವಿಷಯದಲ್ಲಿ ನಾನು ಅಷ್ಟು ಸ್ಪಷ್ಟವಾಗಿ ಕಮಿಟ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ.

Tanks in Manchaladore Forest Area (Construction).

Q.—467. Sri B. C. NANJUNDIAH (Kora).—

Will the Government be pleased to state :—

(*a*) whether estimates have been prepared for the construction of a tank in Manchaladore forest area near Gandikere of Hagalwadi Hobli, Gubbi Taluk, and another tank at the *halla* of Manchaladore Mutt;

(*b*) if so, the amount of the estimate and the area of the atchkat under each;

(*c*) the price for each acre;

(*d*) whether they are aware that there is no big tank anywhere in these parts;

(*e*) whether the Hon'ble Minister for Revenue did not state that he would sanction the construction of these tanks early while replying to question No. 462 tabled on 10th March 1954 during the Budget session of last year;

(*f*) the action taken so far in this respect?

A.—Sri Kadidal MANJAPPA (Minister for Revenue and Public Works).—

(*a*) Yes, for an anicut in one case and for tanks in two other cases.

(*b*)—

	Estimated cost Rs.	*Area of prospective atchkat.* Acres
(1) Anicut across Halla near Yarahalli (Gondaligere).	6,20,000	480
(2) Tanks near Manchaladore across :		
(i) Hirehalla	1,40,500	120
(ii) Matada Halla	97,000	168

(*c*) (1) Rs. 1,300 per acre.
(2) (i) Rs. 1,177 per acre.
(ii) Rs. 577 per acre.

(*d*) Yes.

(*e*) That is not exactly what was stated.

(*f*) The estimate for a tank across Matadahalli has been sanctioned. That in respect of Hirehalla is under consideration. The third estimate is under scrutiny.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಕೆರೆಯ ವಿಚಾರದಲ್ಲಿ ಹೋದವರ್ಷ ತಾವು ಕೊಟ್ಟಿರತಕ್ಕ ಉತ್ತರಕ್ಕೂ ಈ ವರ್ಷ ಕೊಟ್ಟಿರತಕ್ಕ ಉತ್ತರಕ್ಕೂ ವ್ಯತ್ಯಾಸವಾಗಿದೆ. ಇದಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೇನೂ ವ್ಯತ್ಯಾಸ ಕಾಣುವುದಿಲ್ಲವಲ್ಲ ?

ಶ್ರೀ ಬಿ. ಸಿ. ನಂಜುಂಡಯ್ಯ.—It was stated in reply to a Question on 10th March 1954 that a tank across Matadahalla is estimated to cost Rs. 1·45 lakhs. ಈಗ ಇಲ್ಲಿ 97 ಸಾವಿರ ಆಗಿದೆ. Again it was stated that a tank across Hirehalla is estimated to cost Rs. 2 lakhs to irrigate 120 acres. It is now stated that it is estimated to cost Rs. 1,40,500. ಹೋದವರ್ಷ ಹಾಗೆ ಹೇಳಿರಲಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. In the previous reply it was stated that a tank across Halla near Yarahalli is estimated to cost Rs. 4·50 lakhs. ಈ ವರ್ಷ ಆರು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳಾಗಿದೆ. ಈ ವ್ಯತ್ಯಾಸಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಆಖೈರು ಸ್ಕೂಟಿನಿ ಆದಮೇಲೆ ಹಾಗೆ ವ್ಯತ್ಯಾಸವಾಗುವುದುಂಟು.

ಶ್ರೀ ಬಿ. ಸಿ. ನಂಜುಂಡಯ್ಯ.—ಈಗ ತಾವು ಇಲ್ಲಿ ಒದಗಿಸಿರುವ ಉತ್ತರದಲ್ಲಿ ಈ ಮೂರನೆ ಎಸ್ಟಿಮೇಟು ಇನ್ನೂ ಸ್ಕೂಟಿನಿ ಆಗುತ್ತಿದೆ ಎಂದು ಹೇಳಿದ್ದೀರಿ. ಆದರೆ ತಾವು ಈಗ ತಾನೆ ಹೇಳಿದ ಉತ್ತರದಲ್ಲಿ ಫೈನಲ್ ಸ್ಕೂಟಿನಿ ಆಗಿದೆಯೆಂದು ಹೇಳಿದ್ದೀರಿ. ಇದರಲ್ಲಿ ಯಾವುದು ಸರಿ ? ಈ ಎರೇಹಳ್ಳಿ ಅಣೆಕಟ್ಟಿನ ಬಗ್ಗೆ ಆರು ಲಕ್ಷ ಇಪ್ಪತ್ತು ಸಾವಿರದ ಅಂದಾಜಿನ್ನೂ ಸ್ಕೂಟಿನಿ ಆಗಿಲ್ಲವೆಂದು ಭಾವಿಸೋಣವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದರಲ್ಲಿ ಒಂದು ವಿಷಯವಿದೆ. ಈ ಸ್ಕೂಟಿನಿ ಅನ್ನುವುದು ಒಂದು ಲೆವಲ್‌ನಲ್ಲಿಲ್ಲ. ಮೊದಲು ಎಗ್ಜಿಕ್ಯುಟೀವ್ ಇಂಜಿನಿಯರವರ ಲೆವಲನಲ್ಲಿ ಸ್ಕೂಟಿನಿ ಆಗುತ್ತದೆ, ಅನಂತರ ಸೂಪರಿಂಟೆಂಡೆಂಟರ ಲೆವಲ್‌ನಲ್ಲಿ ಸ್ಕೂಟಿನಿ ಆಗುತ್ತದೆ. ಆಖೈರಾಗಿ ಚೀಫ್ ಇಂಜಿನಿಯರ್ ಅವರಿಂದ ಸ್ಕೂಟಿನಿ ಆಗುತ್ತದೆ. ಹೀಗೆ ಮೂರು ಹಂತಗಳಲ್ಲಿ ಸ್ಕೂಟಿನಿ ಆಗುವುದರಿಂದ ಮೊದಲು ಒಂದು ಮತ್ತು ಎರಡನೆಯ ಸ್ಕೂಟಿನಿಯಾದ ಅಂಶಗಳು ಕಡೆಯ ಹಂತದಲ್ಲಿ ವ್ಯತ್ಯಾಸವಾಗಬಹುದು.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಹಿಂದೆ ಈ ಮಠದ ಹಳ್ಳದ ಕೆರೆಯ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಬಂದಾಗ ಇದರ ಬಗ್ಗೆ ಒಂದು ಇರಿಗೇಷನ್ ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕಮಾಡಿ ಪುನಃ ಆ ವಿಚಾರಗಳನ್ನೆಲ್ಲಾ ರೀ-ಎಕ್ಸ್‌ಪೈರಿ ಮಾಡಬೇಕೆಂದು ಹೇಳಿದ್ದು ತಮಗೆ ಜ್ಞಾಪಕವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಆಗ ಇದು ತೊಂಭತ್ತೇಳು ಸಾವಿರಕ್ಕೆ ಎಸ್ಟಿಮೇಟ್ ಆಗಿದ್ದುದು ತಮಗೆ ಜ್ಞಾಪಕವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಆ ಎಕ್ಸ್‌ಪೈರಿ ಆಗುವುದಕ್ಕೆ ಮುಂಚೆಯೇ ಆಗಿತ್ತು. ಆದರೆ ಇರಿಗೇಷನ್ ಎಕ್ಸ್‌ಪೈರಿಯೇ ಬೇರೆ, investigation enquiry ಯೇ ಬೇರೆ. ತಾವು ಯಾವ ಎಕ್ಸ್‌ಪೈರಿಯನ್ನು ಕೇಳಿದ್ದಿರಿ ಎಂಬುದು ನನಗೆ ಜ್ಞಾಪಕವಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈಗ ತಾವು ನೇಮಿಸಿರುವ ಎಕ್ಸ್‌ಪೈರಿ ಕಮಿಟಿಯನ್ನು ಮನ್ನಾ ಮಾಡಿ investigation ಎಕ್ಸ್‌ಪೈರಿ ಮಾಡುವುದಕ್ಕೆ ಪುನಃ ಪರಿಶೀಲನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ನೇಮಕ ಮಾಡಿರುವುದರ ಅಭಿಪ್ರಾಯ ಬಂದಮೇಲೆ ಮುಂದಿನ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈಗ ಈ ಇಂಜಿನಿಯರಿಂಗ್ ಇಲಾಖೆಯಲ್ಲಿ ಏನು ನಡೆಯುತ್ತಿದೆ ಅನ್ನುವುದನ್ನು ನೋಡಿದರೆ ಆ ತುಮಕೂರು ಜಿಲ್ಲೆಯಲ್ಲಿ ಕೆಲವು ಕೆರೆಗಳು ಮಾತ್ರ ಆಗಬೇಕು, ಇನ್ನು ಕೆಲವು ಕೆರೆಗಳು ಮಾತ್ರ ಆಗಬಾರದು ಅನ್ನುವುದು ಎದ್ದುಕಾಣುತ್ತಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿಯ ಅಪಾದನೆಗಳು ಬಂದುದರಿಂದಲೇ ಅದೆಲ್ಲವನ್ನೂ ಪುನಃ ಪರಿಶೀಲನೆಗೆ ಆರ್ಡರ್ ಮಾಡಿರುವುದು.

ಶ್ರೀ ಬಿ. ಸಿ. ನಂಜುಂಡಯ್ಯ.—ಹಾಗಾದರೆ ತಾವು ಈ ವಿಚಾರಗಳನ್ನೆಲ್ಲಾ ಪುನಃ ಪರಿಶೀಲನೆ ಮಾಡುವವರೆಗೆ ಈ ತೊಂಭತ್ತೇಳು ಸಾವಿರದ ಕೆರೆಯ ಕೆಲಸವನ್ನ ಕಾರ್ಯರೂಪಕ್ಕೆ ತರದೆ ಹಾಗೆಯೇ ನಿಲ್ಲಿಸುವಂತೆ ಆರ್ಡರ್ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲಿ.

ಶ್ರೀ ಟಿ. ಎ. ಮೂಡಲಗಿರಿಗೌಡ.—ಈ ಹಿಂದೆ ಈ ಗುಂಡಲಗೆರೆ ಅಣೆಕಟ್ಟಿಗೆ ನಾಲ್ಕು ಲಕ್ಷ ಅಂದಾಜಾಗಿದ್ದುದು ಈಗ ಆರು ಲಕ್ಷ ಇಪ್ಪತ್ತು ಸಾವಿರಕ್ಕೆ ಏರಿದೆ. ಈ ಹಿಂದೆ ಈ ಹೀರೇಹಳ್ಳದ ಕೆರೆಗೆ ಎರಡುಲಕ್ಷ ಚಿಲ್ಲರೆ

(ಟಿ. ಎಚ್. ಮೂಡಲಗಿರಿಗೌಡ.)

ಅಂದಾಜು ಮಾಡಲಾಗಿತ್ತು. ಈಗ ಅದು ಒಂದು ಲಕ್ಷ ಚಿಲ್ಲರೆಗೆ ಇಳಿದಿದೆ. ಈ ಹಿಂದೆ ಈ ಮತದಹಳ್ಳದ ಕೆರೆಗೆ ಒಂದು ಲಕ್ಷದ ಅಂದಾಜನ್ನು ಮಾಡಲಾಗಿತ್ತು. ಈಗ ಅದು ತೊಂಭತ್ತೈಳು ಸಾವಿರಕ್ಕೆ ಇಳಿದಿದೆ. ಹೀಗೆ ನಾಲ್ಕು ಲಕ್ಷಕ್ಕೆ ಅಂದಾಜಾಗಿದ್ದ ಕೆರೆ ಈಗ ಆರು ಲಕ್ಷ ಚಿಲ್ಲರೆಗೆ ಏರಿರುವುದರಿಂದಲೂ ಮತ್ತು ಉಳಿದೆರಡು ಕೆರೆಗಳ ಅಂದಾಜನ್ನು ಈಗ ಇಳಿಸಿರುವುದರಿಂದಲೂ ಇದರಲ್ಲಿ ಸಂಬಂಧಪಟ್ಟವರ ಕೈವಾಡವಿದೆ ಎಂದು ಅರ್ಥ ಭಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಂಕಿಗಳಲ್ಲೇನೋ ವ್ಯತ್ಯಾಸವಿದೆ. ಆದರೆ ಕೈವಾಡವಿದೆ ಅನ್ನುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾವು ಗುಂಡಲಗೆರೆಗೆ ಎಕ್ಸೈರಿ ಬಗ್ಗೆ ಹೋಗಿದ್ದಾಗ ಈ ಕೆಲಸವನ್ನು ಮೊದಲು ಕೈಗೊಳ್ಳುವುದಾಗಿ ಹೇಳಿರಲಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋ ಚೀಸ್.

ಶ್ರೀ ಟಿ. ಎಚ್ ಮೂಡಲಗಿರಿಗೌಡ.—ಶ್ರೀಮಾನ್ ಬಿ. ಸಿ. ನಂಜುಂಡಯ್ಯನವರ ಪ್ರಶ್ನೆಯಲ್ಲಿ ಕೇಳಿರ ತಕ್ಕಂಥ ಎಲ್ಲಾ ವಿಚಾರಗಳನ್ನೂ investigate ಮಾಡುವವರೆಗೆ ಆ ಕೆಲಸಗಳನ್ನೆಲ್ಲಾ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಚ್. ಹುಚ್ಚೇಮಾಸ್ತಿಗೌಡ.—ಶ್ರೀ ಬಿ. ಸಿ. ನಂಜುಂಡಯ್ಯನವರ ಅಭಿಪ್ರಾಯದ ಪ್ರಕಾರ ಮೊದಲು ಈ ಹಿರೇಹಳ್ಳಿಯ ಹತ್ತಿರ ಇದ್ದ ಸೈಟನ್ನು ವ್ಯತ್ಯಾಸ ಮಾಡಿದ್ದರಿಂದ ತಾನೆ ಆ ಅಣೆಕಟ್ಟಿನ ಅಂದಾಜು ಆರು ಲಕ್ಷದ ಇಪ್ಪತ್ತು ಸಾವಿರಕ್ಕೆ ಏರಿದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಒಬ್ಬೊಬ್ಬ ಸದಸ್ಯರು ಹೇಳಿದ ಹಾಗೆಲ್ಲ ಈ ಅಂದಾಜಗಳು ಬದಲಾವಣೆಯಾಗುತ್ತವೆಯೋ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಬದಲಾವಣೆ ಆಗುವುದಕ್ಕೆ ಅವಕಾಶವಿದ್ದರೆ ಆಗ ತಾವು ಹೇಳಿದರೂ ಕೂಡ ಹಾಗೆ ಬದಲಾವಣೆ ಆಗಿಯೇ ಆಗುತ್ತದೆ.

Contribution and Water Rate for restoration of Tanks.

Q.—258. **Sri S. R. NAGAPPA SETTY** (Shimoga).—

Will the Government be pleased to state :—

(*a*) whether there is any Government Order that if tanks are restored the land-holders have to give contribution and water rate per acre ;

(*b*) the rate of land revenue collected per acre under (i) rainfed paddy land (wet land), (ii) tank atchkat wet land, (iii) channel fed wet land where the security of water is given ;

(*c*) when the order was issued to levy water rate if the tanks are repaired ?

A.—**Sri Kadidal MANJAPPA** (Minister for Revenue and Public Works).—

(*a*) There is statutory provision, *vide* Chapter VI of Mysore Irrigation Act.

	Max.		*Average.*	
(*b*)	Rs. a. p.		Rs. a. p.	
(i) Rain-fed paddy land (wet)	... 3 8 0	...	1 14 6	
(ii) Tank atchkat wet land	... 10 0 0	...	4 9 3	
(iii) Channel fed wet land	... 14 4 0	...	7 1 3	
(*c*) No such order has been issued.				

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಳೆಯ ನೀರನ್ನೊದಗಿಸಿಕೊಂಡು ಬತ್ತದ ಬೆಳೆಯನ್ನು ತೆಗೆಯುವಂಥ ತರೀ ಜಮೀನುಗಳ ಕಂದಾಯಕ್ಕಿಂತ, ಕೆರೆ ನೀರನ್ನು ಒದಗಿಸಿ ಬತ್ತದ ಬೆಳೆಯನ್ನು ತೆಗೆಯುವಂಥ ತರೀ ಜಮೀನುಗಳಿಗೆ ಕಂದಾಯ ಜಾಸ್ತಿ ಹಾಕಿರ ತಕ್ಕದ್ದು ಆ ಕೆರೆಯ ನೀರನ್ನು ಈ ವ್ಯವಸಾಯಕ್ಕೋಸ್ಕರ ಶಾಶ್ವತವಾಗಿ ಒದಗಿಸಿಕೊಡುತ್ತಿರುವುದೇ ಕಾರಣ ವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಅದಕ್ಕಾಗಿಯೇ ಆ ಜಮೀನುಗಳಿಗೆ ಕಂದಾಯ ಜಾಸ್ತಿ ಹಾಕಿರುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತಾವು ಹಾಗೆ ನೀರನ್ನು ಒದಗಿಸದೆ ಇಲ್ಲಿಯವರೆಗೆ ಯಾವ ಕಂದಾಯ ವನ್ನೂ ವಸೂಲಾಗಿಲ್ಲವೇ ?

Sri Kadidal MANJAPPA.—That is too general a question.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗೆ ತಾವು ಕೆರೆಗಳಿಂದ ನೀರನ್ನೂ ಸಹ ಅನೇಕ ವರ್ಷಗಳವರೆಗೆ ಒದಗಿಸದೆ ಇದ್ದಾಗ್ಯೂ ಪೂರ್ತಿ ಕಂದಾಯವನ್ನು ವಸೂಲಾಗಿಸಿಕೊಂಡು ಈಗ ಮತ್ತೆ ಅದರ ರಿಪೇರಿಗಾಗಿ ರೈತರಿಂದ ವಾಟರ್ ರೇಟನ್ನು ಬೇರೆ ಕೊಡಿ ಎಂದು ಅದನ್ನೂ ವಸೂಲಾಗಿಸುತ್ತಿರುವುದು ಯಾವ ನ್ಯಾಯ ?

Sri Kadidal MANJAPPA.—It is laid down in the Irrigation Act.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ತಾವು ಅನೇಕ ವರ್ಷಗಳಿಂದ ನೀರನ್ನೇ ಕೊಡದಿದ್ದರೂ ಪೂರ್ತಿ ಕಂದಾಯ ವಸೂಲಾಗಿಸಿಕೊಂಡಿದ್ದರಲ್ಲಿ ಈ ವಾಟರ್ ರೇಟೂ ಸೇರಿರುವುದಿಲ್ಲವೇ ?